Ex-gratia Payment for Marrying Harijan Girls.

362 SRI S. M. SHEERNALY CHANDRASEKHAR (Hosanagar).—Will the Minister for Rural Development and Social Welfare be to pleased state:—

(*a*) whether there is any Government Order for *ex-gratia* payment of Rs. two thousand to persons who marry Harijan Girls.

(*b*) if so, the number of such persons to whom the Government has paid the amount?

SRI N. RACHIAH (Minister for Rural Development and Social Welfare)–

(*a*) Yes.
(*b*) Two.

ಶ್ರೀ ಎಸ್.ಎಂ. ಶೀರನ್ನಾಳಿ ಚಂದ್ರಶೇಖರ್.—ಸರ್ಕಾರದ ಕಾರ್ಯಕ್ರಮದ ಪ್ರಕಾರ ಎರಡು ಜನರಿಗೆ ಮಾತ್ರ ಈ ಸವಲತ್ತನ್ನು ಕೊಡಲಾಗಿದೆ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಇದರಿಂದ ಪ್ರಚಾರ ಸಾಕಷ್ಟು ಆಗಿಲ್ಲ ಎಂದು ತಿಳಿಯೋಣವೆ?

†ಶ್ರೀ ಎನ್. ರಾಚಯ್ಯ.—ಸರ್ಕಾರಕ್ಕೆ ಈಗಾಗಲೇ 33 ಅರ್ಜಿಗಳು ಬಂದಿವೆ. ಅವುಗಳೆಲ್ಲವನ್ನು ಪರಿಶೀಲನೆಗೆ ಒಳಪಡಿಸಿದ್ದೇವೆ. ಆದರೆ, ಎರಡು ಪ್ರಕರಣಗಳಲ್ಲಿ ಮಾತ್ರ, ಇಬ್ಬರು ಹರಿಜನ ಗಂಡುಮಕ್ಕಳು ಅನ್ಯ ಜಾತಿಯ ಇಬ್ಬರು ಹೆಣ್ಣು ಮಕ್ಕಳನ್ನು ಮದುವೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ನಿಯಮದ ಪ್ರಕಾರ ಅವರಿಗೆ ಸರ್ಕಾರ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟಿದೆ. ಇನ್ನು ಪ್ರಚಾರದ ಬಗ್ಗೆ ಹೇಳುವುದಾದರೆ, ದಿನಬೆಳಗಾದರೆ ಸಮಾಜಸುಧಾರಣೆಯಾಗುವ ವಿಚಾರದಲ್ಲಿ ಸಾಕಷ್ಟು ಪ್ರಚಾರ ನಡೆಯುತ್ತಿದೆ ಆದರೆ, ಇದರ ಲಾಭ ಪಡೆಯುವವರು ಮುಂದೆ ಬರಬೇಕಾಗಿದೆ ಅಷ್ಟೆ.

ಶ್ರೀ ಎಸ್. ಎಂ. ಶೀರನ್ನಾಳಿ ಚಂದ್ರಶೇಖರ್.—ಈ ಕಾರ್ಯಕ್ರಮವು ಪ್ರಾರಂಭವಾಗಿ ಇಲ್ಲಿಗೆ ಎರಡು ವರ್ಷಗಳಾದುವು. ಮಾನ್ಯ ಮಂತ್ರಿಗಳು ಹೇಳಿದ 33 ಪ್ರಕರಣಗಳನ್ನೂ ತೆಗೆದುಕೊಂಡರೂ ಅದು ಬಹಳ ಕಡಮೆಯಾಗುತ್ತದೆ. ಆದುದರಿಂದ ಇದರ ಕುರಿತು ಸಾಕಷ್ಟು ಪ್ರಚಾರವಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅಷ್ಟೇ ಅಲ್ಲದೆ ಸರ್ಕಾರದವರು ಕೊಡುವ ಇನ್‌ಸೆಂಟೀವ್ ಕೂಡ ಕಡಮೆ ಇದೆ ಎಂದು ನನ್ನ ಅಭಿಪ್ರಾಯ ಆದುದರಿಂದ, ಇನ್‌ಸೆಂಟೀವ್‌ನ್ನು ಹೆಚ್ಚು ಮಾಡಿದರೆ ಉದ್ದೇಶದಿಂದ ಹೀಗೆ ವಿವಾಹವಾಗಬಯಸುವವರಿಗೆ ಸರ್ಕಾರದಲ್ಲಿ 30 ಪರ್ಸೆಂಟ್ ನೌಕರಿಗಳನ್ನು ಮೀಸಲಿಡುವುದಕ್ಕೆ ಏನಾದರೂ ಕಾನೂನು ಮಾಡುವರೆ?

ಶ್ರೀ ಎನ್. ರಾಚಯ್ಯ.—ಇದರ ಕುರಿತು ಪ್ರಚಾರವನ್ನು ಇನ್ನು ಮೇಲೆ ಮಾಡೋಣ ಇನ್ನು ಉದ್ಯೋಗಗಳನ್ನು ಮೀಸಲಿಡುವ ವಿಚಾರ ಪರಿಶೀಲನೆ ಮಾಡಬೇಕಾದುದಾಗಿದೆ ಇದಕ್ಕೆ ನಿರ್ದಿಷ್ಟವಾದ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ರಾಜ್ಯಾಂಗವನ್ನು ನೋಡಿ, ಆದರಂತೆ ಮಾಡಬೇಕಾಗುತ್ತದೆ.

SHORT NOTICE QUESTION AND ANSWERS

Procurement of paddy.

13. SRI B. G. BANAKAR (Hirekerur).—Will the Minister for Food and Civil Supplies be pleased to state :—

(*a*) the total quantity of paddy fixed for procurement target during 1975-76;

(*b*) the total quantity of paddy already procured as on date:

(*c*) whether the transport levy is taken and the permits are issued to transport paddy to Bangalore, Mangalore, Belgaum and Mysore or Hubli;

(*d*) if not, whether the Government will issue directions to the Deputy Commissioners of paddy growing Districts to take transport levy paddy and than issue permits for transport of paddy?

SMT E. E. VAZ (Minister for Food Civil Supplies) —

(*a*) 2,80,000 tonnes.

(*b*) As on 29th March 1976;

1,94,004 tonnes (Growers Levy)
15,039 tonnes (Transport Levy)

209,043 tonnes

(*c*) Yes.

(*d*) Does not arise.

ಶ್ರೀ ಬಿ.ಜಿ. ಬಣಕಾರ್ —ಈಗ ರಾಜ್ಯದಲ್ಲಿ ಭತ್ತ ಸಾಕಷ್ಟು ಇದೆ ಆದರೆ ಫುಡ್ ಕಾರ್ಪೊರೇಷನ್ನಿನವರು ಅವರ ಏಜೆಂಟರುಗಳಿಗೆ ಮುಕ್ತ ಮಾರುಕಟ್ಟೆಯಲ್ಲಿ ಭತ್ತವನ್ನು ಖರೀದಿ ಮಾಡಬಾರದೆಂದು ಟೆಲಿಗ್ರಾಂ ಮೂಲಕ ಆದೇಶ ಕೊಟ್ಟಿದ್ದಾರೆ. ಆದುದರಿಂದ ಭತ್ತವನ್ನು ಖರೀದಿ ಮಾಡಲಕ್ಕೆ ಸರ್ಕಾರದವರು ಬೇರೊಂದು ಆದೇಶವನ್ನು ಕೊಡುವರೆ?

†ಶ್ರೀ ಎನ್. ಚಿಕ್ಕೇಗೌಡ.—ಈ ವಿಷಯದಲ್ಲಿ ನಿನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಸುದೀರ್ಘವಾದ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈಗೇನೂ ಸರ್ಕಾರಕ್ಕೆ ಹಣದ ಕೊರತೆ ಇಲ್ಲ ಮುಕ್ತ ಮಾರುಕಟ್ಟೆಯಲ್ಲಿರುವ ಭತ್ತವನ್ನು ಸರ್ಕಾರ ಘೋಷಿಸಿದ ಬೆಲೆಯಲ್ಲಿ ಕೊಂಡುಕೊಳ್ಳಬೇಕೆಂದು ಸರ್ಕಾರ ಈಗಾಗಲೇ ಆದೇಶ ಕೊಟ್ಟಿದೆ ಮತ್ತು ಕೊಂಡುಕೊಳ್ಳುವಾಗ ಗುಣಮಟ್ಟವನ್ನು ನೋಡಕೊಂಡುಕೊಳ್ಳಬೇಕೆಂದು ತಿಳಿಸಿದ್ದೇವೆ. ಹೀಗೆ ಕೊಂಡುಕೊಂಡ ಧಾನ್ಯವನ್ನು ಸಂಗ್ರಹಿಸಿದಲು ಮುದುಪೆ ಧಿಕ್ಕಗಳನ್ನು ಸಹ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ ಆ ಪ್ರಕಾರ ಕೆಲವು ಕಡೆ ಚಿತ್ರಗಳನ್ನು ತೆಗೆದುಕೊಂಡಿದ್ದೇವೆ ಆದುದರಿಂದ ಮಾನ್ಯ ಸದಸ್ಯರು ಕಳವಳಪಡುವುದಕ್ಕೆ ಏನೂ ಕಾರಣವಿಲ್ಲವೆಂದು ಸ್ಪಷ್ಟಪಡಿಸಲಿಯಸುತ್ತೇನೆ.

ಶ್ರೀ ಬಿ.ಜಿ. ಬಣಕಾರ್.—ಧಾರವಾಡ ಜಿಲ್ಲೆಗಳಲ್ಲಿರುವ ಫುಡ್ ಕಾರ್ಪೊರೇಷನ್ನಿನ ಏಜೆಂಟರಿಗೆ ಖರೀದಿ ಮಾಡುವುದನ್ನು ಬಂದ್ ಮಾಡಿ ಎಂದು ಟೆಲಿಗ್ರಾಂ ಕಳುಹಿಸಿದ್ದಾರೆ ಫುಡ್ ಕಾರ್ಪೊರೇಷನ್ನಿನವರು ಇನ್ನೂ ಆ ಟೆಲಿಗ್ರಾಂನ್ನು ವಾಪಸ್ಸು ತೆಗೆದುಕೊಂಡಿಲ್ಲ ಆದಕಾರಣ, ಈ ಬಗ್ಗೆ ಸರ್ಕಾರದವರು ವ್ಯವಸ್ಥೆ ಮಾಡುವರೆ?

ಶ್ರೀ ಎನ್. ಚಿಕ್ಕೇಗೌಡ.—ಹಿಂದೆ ಹಣಕಾಸಿನ ತೊಂದರೆ ಇದ್ದುದರಿಂದ ಹಾಗೆ ಮಾಡಲಾಯಿತು. ಈಗ ಟೆಲಿಗ್ರಾಂ ವಾಪಸ್ಸು ತೆಗೆದುಕೊಳ್ಳಲಾಗಿದೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.